ಶ್ರೀ ಬಿ. ಬಸವಲಿಂಗಪ್ಪ.—ಮುಂದಿನ ವರ್ಷಕ್ಕೆ ಕೊಡತಕ್ಕ ಹಣ ಮುಂದಿನ ವರ್ಷ ಕೊಡುತ್ತೇವೆ. ಖರ್ಚು ಮಾಡದೇ ಉಳಿದಿರತಕ್ಕ ಹಣ ಸರ್ಕಾರಕ್ಕೆ ವಾಪಸ್ಸು ಬರುತ್ತದೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಕೇಂದ್ರ ಸರ್ಕಾರದಿಂದ ನೇರವಾಗಿ ಮಂಡಲ ಪಂಚಾಯ್ತಿಗಳಿಗೆ ಬರುವಂಥ ಹಣ ಪ್ರಧಾನರು, ಕಾರ್ಯದರ್ಶಿಗಳು ಹಾಗೂ ಇಂಜಿನಿಯರಿಂಗಳ ವಶದಲ್ಲಿರುತ್ತದೆ. ೧೦–೧೫ ಮಂಡಲಿಗಳಿಗೆ ಸೇರಿದಂತೆ ಸುಮಾರು ೫೦–೬೦ ಲಕ್ಷ ರೂಪಾಯಿಗಳು ಬರುತ್ತದೆ. ಶಾಸಕರಾದ ನಾವುಗಳು ಕೂಡ ತಾಲ್ಲೂಕು ಸಮಿತಿಯ ಅಧ್ಯಕ್ಷರುಗಳಾಗಿ ಇದನ್ನು ನೋಡಿದ್ದೇವೆ. ಹೀಗೆ ಬಂದಿರುವಂಥ ಹಣದಲ್ಲಿ ಶೇಕಡಾ ೫೦ ಭಾಗ ಕೂಡ ಖರ್ಚಾಗಿರುವುದಿಲ್ಲ. ಇದಕ್ಕೆ ಕಾರಣ ಮಂಡಲ ಪಂಚಾಯ್ತಿಯಲ್ಲಿ ಸರಿಯಾದ ಯೋಜನೆಗಳನ್ನು ರೂಪಿಸಿರುವುದಿಲ್ಲ. ಪಂಚಾಯ್ತಿಯಲ್ಲಿ ರೆಸ್ಪೂಲ್ಯೂಷನ್ ಆಗಬೇಕು, ಮಂಡಲದ ಪ್ರಧಾನರು ಮತ್ತು ಸದಸ್ಯರುಗಳಿಂದ ಒಗ್ಗಟ್ಟಿನಿಂದ ಇದ್ದು, ಹಳ್ಳಿಗೆ ಬೇಕಾದ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸುವಂಥ ಯೋಜನೆಗಳನ್ನು ಮೊದಲು ರೂಪಿಸಬೇಕಾಗುತ್ತದೆ. ಇಂಥ ಒಂದು ವ್ಯವಸ್ಥೆ ಸರಿಯಾಗಿಲ್ಲದೇ ಇರುವುದರಿಂದ ಸರ್ಕಾರದಿಂದ ಬಂದಿರತಕ್ಕ ಹಣ ಖರ್ಚಾಗದೆ ಹಾಗೆಯೇ ಉಳಿಯುತ್ತದೆ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಸೂಕ್ತ ಗಮನಹರಿಸಿ, ಮಂಡಲ ಪಂಚಾಯ್ತಿಗಳಿಗೆ ಸರ್ಕಾರದಿಂದ ಬರತಕ್ಕ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡುವುದಕ್ಕೆ ಬೇಕಾದ ಅನುಕೂಲತೆಯನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಹುಣಸೂರು ತಾಲ್ಲೂಕಿನಲ್ಲಿ ೮–೧೦ ಲಕ್ಷ ರೂಪಾಯಿಗಳು ಕೂಡ ಖರ್ಚಾಗಿಲ್ಲವೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಂಡಲ ಪಂಚಾಯ್ತಿಗಳಿಗೆ ಕೊಡತಕ್ಕ ಪೂರ್ತಿ ಹಣವನ್ನು ಖರ್ಚು ಮಾಡುವುದರಲ್ಲಿ ಒಹಳ ನ್ಯೂನತೆಗಳು ಇವೆ. ತಕ್ಷಣ ಹಣ ಖರ್ಚು ಮಾಡುವುದಕ್ಕಾಗುವುದಿಲ್ಲ. ಕಾಮಗಾರಿಗಳನ್ನು ಮಾಡಬೇಕಾದರೆ, ಅಂದಾಜು ತಯಾರು ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದ ಸಿಬ್ಬಂದಿವರ್ಗವನ್ನು ಮಂಜೂರು ಮಾಡಬೇಕಾಗುತ್ತದೆ. ಇದನ್ನೆ ಮಂಜೂರು ಮಾಡಿದ ಮೇಲೆ ಈ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಈಗ ಸ್ವಲ್ಪ ತಡ ಆಗಿದೆ. ಅದರ ಜೊತೆಗೆ ಈಗ ಖರ್ಚು ಮಾಡುವ ಹಣ ಊರಿನ ಅಭಿವೃದ್ಧಿ, ಮತ್ತು ಸಂಪತ್ತನ್ನು ಅಭಿವೃದ್ಧಿ ಮಾಡತಕ್ಕದ್ದಕ್ಕೆ ಖರ್ಚು ಮಾಡಬೇಕೆಂಬ ನಿಯಮ ಇದೆ. ಅವರಿಗೆ ಹಲವಾರು ಕಾರಣಗಳಿಂದ ಖರ್ಚು ಮಾಡಲಿಕ್ಕೆ ಆಗಿಲ್ಲ. ಸರ್ವೇಸಾಧಾರಣವಾಗಿ ಸಂಪತ್ತಭಿವೃದ್ಧಿ ಕಾರ್ಯಗಳ ಬಗ್ಗೆ ಮಂಡಲ್ ಪಂಚಾಯಿತಿನವರು ಏನು ಖರ್ಚು ಮಾಡುತ್ತಿದ್ದಾರೆ. ಅದರ ಜೊತೆಗೆ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಇದೆ. ಅದು ಒಡವರಿಗೋಸ್ಕರ ಖರ್ಚು ಮಾಡತಕ್ಕದ್ದು. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಖರ್ಚು ಮಾಡತಕ್ಕ ಹಣ, ಅದರಲ್ಲಿ ಶೇಕಡ ೫,೧೦,೧೫ರಷ್ಟು ಮಾತ್ರ ಖರ್ಚು ಮಾಡಲಿಕ್ಕೆ ಒಂದು ಪ್ರಯತ್ನ ನಡೆದಿದೆ ಆದ್ದರಿಂದ, ಮಾನ್ಯ ಸದಸ್ಯರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮಂಡಲ್ ಪಂಚಾಯಿತಿಯಲ್ಲಿ ಇಂಥ ಒಂದು ವಿಶೇಷ ಘಟಕ ಯೋಜನೆಯ ಪ್ರಕಾರ ಒಡವರಿಗೆ ಸಲ್ಲತಕ್ಕ ಹಣವನ್ನು ಖರ್ಚು ಮಾಡಲಿಕ್ಕೆ ಅವರಿಗೆ ಏತಕ್ಕೆ ಮನಸ್ಸು ಬಂದಿಲ್ಲ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ ಮತ್ತು ಅದಕ್ಕೆ ನಾವು ಏನಾದರೂ ಒಂದು ಪರಿಹಾರ ಕಂಡುಹಿಡಿಯಬೇಕಾಗುತ್ತದೆ. ಅದು ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ತಮ್ಮ ಸಲಹೆಯನ್ನೂ ತೆಗೆದುಕೊಂಡು ಕಾರ್ಯಕ್ರಮಗಳನ್ನು ನಿರೂಪಿಸಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಚಿಂತಾಮಣಿ ಆಸ್ಪತ್ರೆಗಾಗಿ ಮಹಿಳಾ ವೈದ್ಯಾಧಿಕಾರಿ

೧೭೬. ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ, ಬಟ್ಲಹಳ್ಳಿ ಇಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದಿರುವುದು ನಿಜವೆ ?

ಆ) ಹಾಗಿದ್ದರೆ, ಸದರೀ ಆಸ್ಪತ್ರೆಗಳಲ್ಲಿ ಯಾವ ದಿನಾಂಕದಿಂದ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದೆ ?

ಇ) ಮಹಿಳಾ ವೈದ್ಯಾಧಿಕಾರಿಗಳಿಲ್ಲದೆ ನಾಗರೀಕರಿಗೆ ಅದರಲ್ಲೂ ಮಹಿಳೆಯರಿಗೆ ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರಕ್ಕೆ ತಿಳಿದಿದೆಯೇ ?

ಈ) ಹಾಗಿದ್ದ ಪಕ್ಷಕ್ಕೆ ಸದರೀ ಹುದ್ದೆಯನ್ನು ತುಂಬಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀಮತಿ ಮನೋರಮ್ಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಹೌದು.

ಆ) ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ ಇಲ್ಲಿ ಡಿಸೆಂಬರ್ ೧೯೮೯ರಿಂದಲೂ ಪ್ರಾಥಮಿಕ ಆರೋಗ್ಯ ಕೇಂದ್ರ ಬಟ್ಲಹಳ್ಳಿ ಇಲ್ಲಿ ಜೂನ್ ೧೯೮೯ರಿಂದಲೂ ಖಾಲಿ ಇವೆ.

ಇ) ತಿಳಿದಿದೆ.

ಈ) ಖಾಲಿ ಇರುವ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡಲಾಗುವುದು.

ಶ್ರೀ ಚೌಡರೆಡ್ಡಿ.—ಚಿಂತಾಮಣಿ ಜನರಲ್ ಆಸ್ಪತ್ರೆಯಲ್ಲಿ ಎಷ್ಟು ಬೆಡ್ಸ್ ಇವೆ. ಮತ್ತು ಬಟ್ಲಹಳ್ಳಿ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಎಷ್ಟು ಬೆಡ್ಸ್ ಇವೆ ಹಾಗೂ ಹೋದ ವರ್ಷ ಅಲ್ಲಿ ಎಷ್ಟು ಆಪರೇಷನ್ ನಡೆದಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀಮತಿ ಮನೋರಮ ಮಧ್ವರಾಜ್.—ಅಧ್ಯಕ್ಷರೆ ಮಾನ್ಯ ಸದಸ್ಯರ ಮಹಿಳಾ ವೈದ್ಯಾಧಿಕಾರಿಗಳ ಬಗ್ಗೆ ಇಲ್ಲಿ ಪ್ರಶ್ನೆ ಕೇಳಿರುವಂತಾದ್ದು. ಈಗ ಅವರು ಕೇಳಿರುವ ಪ್ರಶ್ನೆಗೆ ಉತ್ತರ ಬೇಕೆಂದರೆ, ಅವರು ಬೇರೆ ಪ್ರಶ್ನೆ ಕೇಳಬೇಕು.

ಅಧ್ಯಕ್ಷರು.—ಈ ಬಗ್ಗೆ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಹಾಕಬೇಕು. ಆ ಆಸ್ಪತ್ರೆಗಳಲ್ಲಿ ಎಷ್ಟು ಬೆಡ್ಸ್ ಇವೆ ಎಂದು ಕೇಳಿದರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಚೌಡರೆಡ್ಡಿ.—ಜೂನ್‌ನಿಂದ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಆಪರೇಷನ್‌ಗಳು ಆಗುತ್ತಿವೆ. ಅದು ಫ್ಯಾಮಿಲಿ ಪ್ಲಾನಿಂಗ್ ಆಸ್ಪತ್ರೆ. ಆಲ್ಲಿ ಮಹಿಳಾ ವೈದ್ಯಾಧಿಕಾರಿ ಇಲ್ಲ. ಇನ್ನು ಚಿಂತಾಮಣಿಯಲ್ಲಿರುವ ಜನರಲ್ ಆಸ್ಪತ್ರೆಯಲ್ಲೂ ವೈದ್ಯರು ಇಲ್ಲ. ಆಲ್ಲಿ ಸುಮಾರು ೫೦ ಸಾವಿರ ಜನರು ಇದ್ದಾರೆ. ನಾನು ೧೦-೧೫ ಸಾರಿ ಹೋಗಿದ್ದೆ, ಅವರು ಏನು ಹೇಳುತ್ತಾರೆಂದರೆ, ಯಾರಾದರೂ ಲೇಡಿ ಡಾಕ್ಟರ್ ಬರುತ್ತಾರೆಯೇ ಕೇಳಿಕೊಂಡು ಬನ್ನಿ ನಾವು ಹಾಕಿಕೊಡುತ್ತೇವೆಂದು ಹೇಳುತ್ತಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಂದ ನಾನು ಉತ್ತರ ಬಯಸುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಸಂನಂದಬಾಯಿ ಅವರನ್ನು ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಡಿಸೆಂಬರ್‌ನಲ್ಲಿ ನಿಯೋಜಿಸಲಾಗಿದೆ. ಇನ್ನೊಂದು ಪ್ರಾಥಮಿಕ ಆರೋಗ್ಯ ಕೇಂದ್ರ ಬಟ್ಲಹಳ್ಳಿಯಲ್ಲಿದ್ದವರನ್ನು ಕೂಡ ಜೂನ್ ೧೯೮೯ರಿಂದ ಸ್ನಾತಕೋತ್ತರ ಶಿಕ್ಷಣಕ್ಕೆ ನಿಯೋಜಿಸಲಾಗಿದೆ. ಸ್ನಾತಕೋತ್ತರ ವಿದ್ಯಾಭ್ಯಾಸದಿಂದ ಈಗಾಗಲೇ ಹಿಂದಿರುಗಿದ ಮಹಿಳಾ ವೈದ್ಯಾಧಿಕಾರಿಗಳನ್ನು ಈ ಖಾಲಿ ಹುದ್ದೆಗಳಲ್ಲಿ ತುಂಬಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಚೌಡರೆಡ್ಡಿ.—ಕಳೆದ ಒಂದು ವರ್ಷದಿಂದ ಬಟ್ಲಹಳ್ಳಿಯ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ವೈದ್ಯರು ಇಲ್ಲ.

ಶ್ರೀಮತಿ ಮನೋರಮ ಮಧ್ವರಾಜ್.—ಈಗ ಹಾಕಿಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ —ಮಹಿಳಾ ವೈದ್ಯಾಧಿಕಾರಿಗಳ ಕೊರತೆಯಿಂದ ಆ ಸ್ಥಾನಗಳನ್ನು ಭರ್ತಿ ಮಾಡಲಿಕ್ಕೆ ಆಗಲಿಲ್ಲವೋ, ಅಥವಾ ಅಲ್ಲಿಗೆ ಹಾಕಿದವರು ಹೋಗದೇ ಇರುವುದು ಕಾರಣವೋ ? ಈಗ ಅಲ್ಲಿಗೆ ಯಾರಾದರೂ ಹೋಗಲಿಕ್ಕೆ ತಯಾರಾಗಿರುವವರಿದ್ದರೆ. ತಕ್ಷಣ ಅವರನ್ನು ವರ್ಗ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಮನೋರಮ ಮಧ್ವರಾಜ್.—ಇದಕ್ಕೆ ಎರಡು ಕಾರಣಗಳಿರುತ್ತವೆ. ಕೆಲವೊಮ್ಮೆ ನಾವು ಯಾರನ್ನಾದರೂ ವರ್ಗಾವಣೆ ಮಾಡಿದರೆ ಮಹಿಳಾ ವೈದ್ಯಾಧಿಕಾರಿಯವರಾಗಲಿ, ಪುರುಷ ವೈದ್ಯಾಧಿಕಾರಿ ಯವರಾಗಲಿ. ಕೆಲವೊಂದು ಹಳ್ಳಿಗಳಿಗೆ ಹೋಗಲಿಕ್ಕೆ ಇಷ್ಟಪಡವುದಿಲ್ಲ. ಅಂತಹ ಸಂದರ್ಭಗಳಲ್ಲಿ ಅವರಿಗೆ ಒತ್ತಾಯ ಮಾಡಬೇಕಾಗುತ್ತದೆ. ಆದ್ದರಿಂದ, ಯಾರು ಆ ಸ್ಥಳಕ್ಕೆ ಹೋಗಲಿಕ್ಕೆ ಇಷ್ಟಪಡುವವರಿದ್ದಾರೆ, ಅಂತಹವರ ಹೆಸರು ಕೊಡಿ ಎಂದು ಹೇಳಿದ್ದು ನಿಜ. ಅಂತಹವರ ಹೆಸರನ್ನು ತಾವು ಸೂಚಿಸಿದರೆ ಅಲ್ಲಿಗೆ ಅವರನ್ನು ಹಾಕಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿ. ಬೈರೇಗೌಡ.—ನಾನು ಈಗಾಗಲೇ ಈ ವಿಷಯದ ಬಗ್ಗೆ ಪತ್ರ ಬರೆದು ತಿಳಿಸಿದ್ದೇನೆ. ಅವರನ್ನು ಅಂಥ ಕಡೆ ದಾಕಲುಪಡಿಸಲಿಕ್ಕೆ ತಯಾರಿದ್ದೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಸಾಮಾನ್ಯ ಪರ್ಗಾವಣೆ ಸಮಯದಲ್ಲಿ ಹಾಕುತ್ತೇವೆ,

೧೧–೩೦ ಎ. ಎಂ.

ಶ್ರೀ ಆರ್. ಎನ್. ನಾಯಕ್.—ಯಾವ ವೈದ್ಯಾಧಿಕಾರಿಗಳು ಹಳ್ಳಿಗಳಿಗೆ ಹೋಗುವುದಕ್ಕೆ ತಯಾರಿಲ್ಲವೋ ಅಂತಹವರನ್ನು ಕೆಲಸದಿಂದ ವಜಾ ಮಾಡುವುದಕ್ಕೆ ತಮಗೆ ಏನಾದರೂ ಅಧಿಕಾರ ಇದೆಯೇ ಇಲ್ಲವೇ ? ಇದರ ಬಗ್ಗೆ ಕಾನೂನು ಮಾಡುವುದಕ್ಕೆ ಸರಕಾರಕ್ಕೆ ಸಾಧ್ಯವಿದೆಯೆ ಹೇಗೆ ?

ಶ್ರೀಮತಿ ಮನೋರಮಾ ಮಧ್ವರಾಜ್.—ಕಾನೂನು ಕ್ರಮ ತೆಗೆದುಕೊಳ್ಳಬಹುದು. ಆದರೆ ಕೆಲವು ರಾಜಕೀಯ ಒತ್ತಡಗಳು ಇಲ್ಲದಿದ್ದರೆ ಸರ್ಕಾರಕ್ಕೆ ಫ್ರೀ ಹ್ಯಾಂಡ್ ಕೊಟ್ಟರೆ ಖಂಡಿತವಾಗಿ ನಾನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜಿನ ಪ್ರಾರಂಭ

೨೨. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ವೈದ್ಯಕೀಯ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳು ಬಹಳ ಚುಟುಕಾಗಿ ಉತ್ತರ ಕೊಟ್ಟಿದ್ದಾರೆ. ಹಿಂದೆ ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ, ಶಿವಮೊಗ್ಗದಲ್ಲಿ ಸಚಿವ ಸಂಪುಟದ ಸಭೆ ನಡೆದಾಗ ಅಲ್ಲಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದರು. ತಮಗೆ ಗೊತ್ತಿರುವ ಹಾಗೆ ಅಲ್ಲಿ ಕುವೆಂಪು ವಿಶ್ವವಿದ್ಯಾನಿಲಯ ಇದೆ. ಹಿಂದೆ ವಿದ್ಯಾ ಸಚಿವರಾಗಿದ್ದಂತಹ ಶ್ರೀ ಬದರೀ ನಾರಾಯಣರವರು ಹತ್ತು ಲಕ್ಷ ರೂಪಾಯಿಗಳನ್ನು ಮೆಡಿಕಲ್ ಕಾಲೇಜಿಗೋಸ್ಕರ ಸಂಗ್ರಹ ಮಾಡಿ ಇಟ್ಟಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಸಹಾನುಭೂತಿಯಿಂದ ಇದನ್ನು ಪರಿಶೀಲನೆ ಮಾಡಿ ಶಿವಮೊಗ್ಗದಲ್ಲಿ ಖಾಸಗೀ ಅಥವಾ ಸರಕಾರೀ ಮೆಡಿಕಲ್ ಕಾಲೇಜನ್ನು ತೆಗೆಯಬೇಕು. ಆ ಜಿಲ್ಲೆ ಈ ವಿಚಾರದಲ್ಲಿ ಬಹಳ ವರ್ಷಗಳಿಂದ ವಂಚಿತವಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು, ಸರಕಾರದ ನಿಲುವು ಏನು ಎಂಬುದನ್ನು ಹೇಳಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಗುಂಡೂರಾವ್‌ರವರ ಸರ್ಕಾರದ ಸಚಿವ ಸಂಪುಟವು ಮೆಡಿಕಲ್ ಕಾಲೇಜನ್ನು ಶಿವಮೊಗ್ಗಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಇಲ್ಲಿ ಈಗ ಇರುವುದು ಶ್ರೀ ವೀರೇಂದ್ರ ಪಾಟೀಲರ ಸರಕಾರ. ಆದ್ದರಿಂದ ನವಂಗೆ ಆ ಉದ್ದೇಶ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮ್ಮ ಸರಕಾರವೇನಾದರೂ ಮುಂದೆ ಬರುವಂತಹ ದಿವಸಗಳಲ್ಲಿ ಈ ರಾಜ್ಯದಲ್ಲಿ ಖಾಸಗೀ ಅಥವಾ ಸರಕಾರೀ ಮೆಡಿಕಲ್ ಕಾಲೇಜುಗಳನ್ನು ತೆಗೆಯಬಾರದೆಂದು ನಿಶ್ಚಯವನ್ನೇನಾದರೂ ಮಾಡಿದ್ದೀರಾ ? ಈ ವಿಷಯದ ಬಗ್ಗೆ ಸರಕಾರದ ಪಾಲಿಸಿ ಏನು ?

ಶ್ರೀಮತಿ ಮನೋರಮಾ ಮಧ್ವರಾಜ್.—ಅಂಥಾದ್ದೇನೂ ಇಲ್ಲ. ಸಧ್ಯಕ್ಕೆ ಅಂತಹ ಉದ್ದೇಶ ಇಲ್ಲ.